MVC No. 540/2019 PW-1

<u>ದಿನಾಂಕ **21.06.2024** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಎದುರುದಾರರಾದ ಆರ್ **2** ಪರ ಶ್ರೀ ಕೆ ಟಿ ಟಿ ವಕೀಲರಿಂದ ಃ</u>

ನನ್ನ ತಂದೆ 10 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ತಾಯಿ ತೀರಿಕೊಂಡಾಗ ನನಗೂ ಮತ್ತು ನನ್ನ ತಂಗಿಗೂ ಮದುವೆಯಾಗಿತ್ತು. ನನ್ನ ತಾಯಿ ತೀರಿಕೊಂಡಾಗ ನನಗೆ 27 ವರ್ಷ ವಯಸ್ಸು, ನನ್ನ ತಂಗಿಗೆ 24 ವರ್ಷ ವಯಸ್ಸು ಆಗಿತ್ತು. ನನ್ನ ತಾಯಿಗೆ 47 ವರ್ಷ ಆಗಿದ ಬಗ್ಗೆ ದಾಖಲೆ ನೀಡಿದ್ದೇವೆ. ನನ್ನ ತಾಯಿ ಸ್ವಂತ ಮನೆಯಲ್ಲಿ ವಾಸವಾಗಿದ್ದರು. ನಾವಿಬ್ಬರು ಮದುವೆಯಾಗಿ ಗಂಡನ ಮನೆಯಲ್ಲಿದ್ದೆವು ಎಂದರೆ ಸಾಕ್ಷಿ ನನ್ನ ತಾಯಿಯ ಮನೆಯಲ್ಲಿ ಇದ್ದೆವು ಎಂದು ನುಡಿಯುತ್ತಾರೆ. ಈ ಬಗ್ಗೆ ಪಡಿತರ ಚೀಟಿಯನ್ನು ಹಾಜರುಪಡಿಸಿರುತ್ತೇವೆ. ಈ ಪಡಿತರ ಚೀಟಿ ನಮ್ಮ ಮದುವೆಗೂ ಮೊದಲು ಮಾಡಿಸಿದ್ದೇನೆಂದರೆ ಸುಳ್ಳು. 2014 ರಲ್ಲಿ ನನ್ನ ಮದುವೆಯಾಗಿರಲಿಲ್ಲ. ನನ್ನ ತಾಯಿ ತಿಂಗಳಿಗೆ 20000/- ದುಡಿಯುತ್ತಿದ್ದ ಬಗ್ಗೆ ಹಸು ಸಾಕಾಣಿಕೆ ಮತ್ತು ಕೂಲಿ ಕೆಲಸ ಮಾಡುತ್ತಿದ್ದರು ಆ ಬಗ್ಗೆ ಡೈರಿ ದಾಖಲೆ ಹಾಜರು ಪಡಿಸುತ್ತೇನೆ. ನನ್ನ ತಾಯಿ ಯಾವುದೇ ಹಸು ಸಾಕಾಣಿಕೆ ಮಾಡುತ್ತಿರಲಿಲ್ಲ ಮತ್ತು ವರಮಾನ ಬರುತ್ತಿರಲಿಲ್ಲ ಎಂದರೆ ಸುಳ್ಳು. ಕೊಲ್ಲಿ ಸರ್ಕಲ್ ಜನ ಸಂದಣಿಯಿಂದ ಕೂಡಿರುತ್ತದೆ ಸರಿ. ಈ ವೃತ್ತಕ್ಕೆ ಎರಡು ದಾರಿಗಳು ಸೇರುತ್ತವೆ ಎಂದರೆ ನಿಜ. ಈ ವೃತ್ತದಲ್ಲಿ ಯಾವುದೇ ವಾಹನ ಜೋರಾಗಿ ಚಾಲನೆ ಮಾಡಲು ಆಗುವುದಿಲ್ಲ ಎಂದರೆ ಸುಳ್ಳು. ಈ ವೃತ್ತದ ಪಕ್ಕದಲ್ಲಿ ಬ್ರಿಡ್ಜ್ ಇದ್ದು, ರಸ್ತೆಯ ಹುಬ್ಬುಗಳು ಹಾಕಿದ್ದಾರೆಂದರೆ ನಿಜ. ನನ್ನ ಗಂಡನ ಅಜಾಗರುಕತೆಯಿಂದ ವಾಹನ ಚಲಾಯಿಸಿ ತಾನೇ ಬಿದ್ದು ಅಪಘಾತ ಮಾಡಿಕೊಂಡಿದ್ದಾರೆಂದರೆ ಸುಳ್ಳು. ನನ್ನ ಗಂಡನ ವಾಹನದ ಹಿಂಭಾಗಕ್ಕೆ ನಷ್ಟ ಉಂಟಾಗಿರುತ್ತದೆ. ವಕೀಲರು ತೋರಿಸಿದ ಭಾವಚಿತ್ರದಲ್ಲಿ ನನ್ನ ಗಂಡನ ವಾಹನ ಇದೆ. ವಾಹನದ ಹಿಂಬದಿ ನಂಬರ್ ಪ್ಲೇಟ್ ಗೂ ಮತ್ತು ಇಂಡಿಕೇಟರ್ ಗೂ ಯಾವುದೇ ನಷ್ಟ ಉಂಟಾಗಿಲ್ಲ ಎಂದರೆ ನಿಜ. ನನ್ನ ಗಂಡ ಸ್ವತಃ

ತಾನೇ ಬಿದ್ದು, ಅಪಘಾತ ಮಾಡಿಕೊಂಡಿದ್ದು, ಆ ಸಮಯದಲ್ಲಿ ಕೆ ಎಸ್ ಆರ್ ಟಿ ಸಿ ಬಸ್ಸು ಹೋಗಿದ್ದರಿಂದ ಈ ಬಸ್ಸನ್ನು ಸೇರಿದ್ದೇವೆಂದರೆ ಸುಳ್ಳು. ಕೆ ಎಸ್ ಆರ್ ಟಿ ಸಿ ಬಸ್ಸು ಯಾವುದೇ ಅಪಘಾತ ಮಾಡಿಲ್ಲ ಎಂದರೆ ಸುಳ್ಳು.

ಮರುವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.